# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಚನ್ನರಾಯಪಟ್ಟಣ

**ಸಿ.ಸಿ. ನಂ. 102/2020**

**ದಿನಾಂಕಃ 17.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

ಪಿಡಬ್ಲ್ಯೂ- 2

| | |
|---|---|
| ಹೆಸರು ಃ | **ರಾಮಕೃಷ್ಣಗೌಡ** |
| ತಂದೆ/ಗಂಡನ ಹೆಸರು ಃ | **ಚಂದ್ರಶೇಖರ್** |
| ವಯಸ್ಸು ಃ | **43 ವರ್ಷ** |
| ಉದ್ಯೋಗ ಃ | **ವ್ಯವಸಾಯ** |
| ವಾಸಸ್ಥಳ ಃ | **ಬ್ಯಾಡರಹಳ್ಳಿ** |

**ಮುಖ್ಯ ವಿಚಾರಣೆ ಪಿರ್ಯಾದುದಾರರ ಪರ ವಕಿಲರಿಂದಃ**

17.01.2019 ರಂದು ನಮ್ಮ ಮನೆಯ ಹತ್ತಿರ ನಾಗರಾಜುರವರ ಮನೆ ಇದೆ. ನಾಗರಾಜುರವರು ಮನೆಯ ಎದುರು ಕಾರ್ ಶೆಡ್ ಮಾಡಿರುತ್ತಾರೆ. ಕಾರ್ ಶೆಡ್ ವಿಚಾರದಲ್ಲಿ ಪಿರ್ಯಾದುದಾರರ ಮತ್ತು ಅವರ ಸಹೋದರರ ನಡುವೆ ಆಗಾಗ ಜಗಳ ಆಗುತ್ತಿರುತ್ತದೆ. ನಾನು ತೋಟದಿಂದ ಬರುವಾಗ ಗಲಾಟೆ ನಡೆಯುತ್ತಿತ್ತು ನಾನು ಅಲ್ಲಿಗೆ ಹೋಗಿ ನೋಡಲಾಗಿ ನಾಗರಾಜುರವರ ಬಾಯಿಂದ ಮತ್ತು ತಲೆ ಮುಂಭಾಗದಿಂದ ರಕ್ತ ಬರುತ್ತಿತ್ತು. ಕಾಳೇಗೌಡರಿಗೆ ಲಕ್ಕೇಗೌಡರು ಕಾಲಿನಿಂದ ಒದ್ದಿರುತ್ತಾರೆ. ಜಗಳವನ್ನು ನಾನು ಬಿಡಿಸಿರುತ್ತೇನೆ. ಜಗಳವನ್ನು ಬಿಡಿಸಿ ನಾನು ಕಾಳೇಗೌಡ ಮತ್ತು ನಾಗರಾಜುರವರನ್ನು ಸರ್ಕಾರಿ ಆಸ್ಪತ್ರೆಗೆ ಸುಮಾರು 11 ರಿಂದ 11.30 ಸಮಯದಲ್ಲಿ ಕರೆದುಕೊಂಡು ಹೋಗಿರುತ್ತೇನೆ. ನ್ಯಾಯಾಲಯದ ಮುಂದಿರುವ 1ನೇ ಆರೋಪಿರವರು ಕಾಳೇಗೌಡರಿಗೆ ಒಡೆದಿರುತ್ತಾರೆ.

**ಪಾಟಿ ಸವಾಲು ಃ ಆರೋಪಿ ಪರ ವಕೀಲರಿಂದ**

ಪಾಟಿ ಸವಾಲಿಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿಯಾಗಿದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಚನ್ನರಾಯಪಟ್ಟಣ